ಕಾರ್ಯದರ್ಶಿ ಹಾಗೂ ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ,
ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕೆ. ಜಿ. ರಸ್ತೆ, ಬೆಂಗಳೂರು – 560 002.

ಸಂ.ಎಫ್1/ಶಿಕನಿ/ಆಡಳಿತ/ಲ್ಯಾ.ಖ/01/2012–13 ದಿನಾಂಕ:-07.06.20112

## ಜ್ಞಾಪನಾ

ವಿಷಯ:–ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ "ಲ್ಯಾಪ್ ಟಾಪ್" ಖರೀದಿಸಲು ಶಿಕ್ಷಕರ ಕಲ್ಯಾಣ ನಿಧಿಯಿಂದ ಸಾಲ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:– ಶಿಕ್ಷಕರ ಕಲ್ಯಾಣ ನಿಧಿ /ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿನಿಧಿ/ರಾಷ್ಟ್ರೀಯ ಕಲ್ಯಾಣ ಪ್ರತಿಷ್ಠಾನದ ಎಕ್ಸಿಕ್ಯೂಟೀವ್ ಕಮಿಟಿ ನಿಧಿಗಳ ರಾಜ್ಯ ಸಮಿತಿ ಸಭೆಯಲ್ಲಿನ ನಿರ್ಣಯದಂತೆ.(ದಿ.27.03.2012)

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಶಾಲಾ ಶಿಕ್ಷಕರುಗಳು "ಲ್ಯಾಪ್ ಟಾಪ್" ಖರೀದಿಸಲು ಇಚ್ಚಿಸಿದ್ದಲ್ಲಿ ಅವರು ಶೇ50%ರಷ್ಟು ಹಣ ನೀಡಿದ್ದಲ್ಲಿ ಉಳಿದ ಶೇ 50% ರಷ್ಟು ಹಣವನ್ನು ರೂ 10,000/– ಕ್ಕೆ ಸೀಮಿತವಾಗಿ ಬಡ್ಡಿ ರಹಿತವಾಗಿ ಶಿಕ್ಷಕರ ಕಲ್ಯಾಣ ನಿಧಿಯಿಂದ ಸಾಲ ನೀಡಲು ರಾಜ್ಯ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗುತ್ತಿದೆ.

1) ಈ ಯೋಜನೆಯಡಿಯಲ್ಲಿ ನೀಡುವ ಸಾಲದ ಗರಿಷ್ಠ ಮಿತಿ ರೂ 10,000/– ಮಾತ್ರ ಇದ್ದು ಮಂಜೂರಾದ ನಂತರ 10 ಸಮಾನ ಕಂತುಗಳಲ್ಲಿ ಶಿಕ್ಷಕರ ವೇತನದಿಂದ ಸಂಗ್ರಹಿಸಿ, ಸಾಲ ಪಡೆದ ಮರು ತಿಂಗಳಿಂದ ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಧಿಗೆ ಪಾವತಿಸ ಬೇಕು.
2) ಸಾಲ ಪಡೆಯಲು ಇಚ್ಚೆಯುಳ್ಳ ಸರ್ಕಾರಿ ಶಿಕ್ಷಕರು ಸಾಲ ಪಡೆಯಲು ಅರ್ಜಿಯನ್ನು ಶಿಕ್ಷಕರ ಕಲ್ಯಾಣ ನಿಧಿಯ ವೆಬ್‌ಸೈಟ್ **www.schooleducation.kar.nic.in** ಮೂಲಕ ಪಡೆದುಕೊಂಡು ಶಾಲಾ ಮುಖ್ಯ ಶಿಕ್ಷಕರ ಮುಖಾಂತರ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸ ಬೇಕು.
3) ಕ್ಷೇತ್ರ ಶಿಕ್ಷಣಾಧಿಕಾರಿಗಳು ಇಂತಹ ಅರ್ಜಿಗಳನ್ನು ಪರಿಶೀಲಿಸಿ, ಶೈಕ್ಷಣಿಕ ವರ್ಷದಲ್ಲಿ ಸೆಪ್ಟಂಬರ್ 5ರ ಒಳಗಾಗಿ ಶಿಕ್ಷಕರ ಕಲ್ಯಾಣ ನಿಧಿಯ ಕಛೇರಿಗೆ ಕ್ರೂಢೀಕೃತ ತಃಖ್ತೆಯನ್ನು ಅನುಬಂಧಿತ ನಮೂನೆಯಲ್ಲಿ ಸಲ್ಲಿಸಿ ಸಾಲದ ಮುಂಗಡ ಪಡೆಯುವುದು. ( ಶಿಕ್ಷಕರುಗಳ ಅರ್ಜಿಗಳನ್ನು ಅವು ಬಂದ ದಿನಾಂಕಾನುಸಾರ ಜೋಡಿಸಿರತಕ್ಕದ್ದು. )
4) ಈ ಯೋಜನೆಯಡಿಯಲ್ಲಿ ಸಾಲ ಪಡೆಯುವ ಶಿಕ್ಷಕರುಗಳು ಕಡ್ಡಾಯವಾಗಿ ಶಿಕ್ಷಕರ ಕಲ್ಯಾಣ ನಿಧಿಯಿಂದ ಆಜೀವ ಸದಸ್ಯತ್ವ ಕಾರ್ಡ್ ಹೊಂದಿರತಕ್ಕದ್ದು, ಹಾಗೂ ಕನಿಷ್ಠ 5 ವರ್ಷಗಳ ಸೇವೆ ಪೂರೈಸಿರಬೇಕು. ನಿವೃತ್ತಿ ದಿನಾಂಕಕ್ಕೆ ಕನಿಷ್ಠ 2 ವರ್ಷಗಳ ಸೇವೆ ಇರತಕ್ಕದ್ದು.
5) ಶಿಕ್ಷಕರ ಕಲ್ಯಾಣ ನಿಧಿಯಿಂದ ಸಾಲದ ಮುಂಗಡವನ್ನು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪಡೆದುಕೊಂಡು ಮೇಲ್ಕಂಡ ಷರತ್ತುಗಳ ಅನ್ವಯ ಅರ್ಹರಿರುವ ಶಿಕ್ಷಕರುಗಳಿಗೆ ಮಾತ್ರ ಸಾಲ ಮಂಜೂರು ಮಾಡಿ 10 ಸಮ ಕಂತುಗಳಲ್ಲಿ ಆಯಾ ಶಿಕ್ಷಕರುಗಳಿಂದ ಕಟಾಯಿಸಿ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಗೆ ಬ್ಯಾಂಕ್ ಹುಂಡಿ ಮೂಲಕ ಪಾವತಿಸತಕ್ಕದ್ದು,
6) ಸಾಲದ ಅರ್ಜಿ ಸಲ್ಲಿಸಿದ ಶಿಕ್ಷಕರುಗಳು ಮೊದಲು ಲ್ಯಾಪ್ ಟಾಪ್‌ನ್ನು ಖರೀದಿಸಿ ಅದರ ಮೂಲ ಬಿಲ್ಲನ್ನು ವಾರಂಟಿ ಕಾರ್ಡಿನ ಧೃಢೀಕೃತ ಪ್ರತಿಯೊಂದಿಗೆ ಸಂಬಂದಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿದ ನಂತರವೇ ಶಿಕ್ಷಕರ ಕಲ್ಯಾಣ ನಿಧಿಯಿಂದ ನೀಡಲಾಗುವ ಗರಿಷ್ಠ 10,000/–ಗಳ ಸಾಲವನ್ನು ಪಾವತಿಸಲಾಗುವುದು.
7) 2012–13ನೇ ಸಾಲಿನಲ್ಲಿ ಪ್ರತಿ ತಾಲ್ಲೋಕಿಗೆ 5 ಪ್ರಾಥಮಿಕ ಹಾಗೂ 3 ಪ್ರೌಢಶಾಲಾ ಶಿಕ್ಷಕರಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.
8) ಶಿಕ್ಷಕರುಗಳಿಗೆ ಸಾಲ ಮಂಜೂರಾತಿ ಮಾಡುವುದು, ಮತ್ತು ಅವರಿಂದ ಸಮಕಂತುಗಳಲ್ಲಿ ಕಟಾಯಿಸಿ ನಿಧಿಗಳ ಕಛೇರಿಗೆ ಮರುಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ.

ಆಯುಕ್ತರು ಹಾಗೂ ಕಾರ್ಯದರ್ಶಿಗಳು/ ಖಜಾಂಚಿಗಳು
ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು

# ಅನುಬಂಧ–1

## ಶಿಕ್ಷಕರ ಕಲ್ಯಾಣ ನಿಧಿಗಳ ಕಛೇರಿಗೆ ಸಲ್ಲಿಸ ಬೇಕಾದ ಕ್ರೂಢೀಕೃತ ನಮೂನೆ

| ಕ್ರ.ಸಂ | ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಆಜೀವ ಸದಸ್ಯತ್ವ ಕಾರ್ಡ ಸಂಖ್ಯೆ | ಅರ್ಜಿ ಸಲ್ಲಿಸಿದ ದಿನಾಂಕ | ಕೇಳಿದ ಸಾಲದ ಮೊತ್ತ | ಷರಾ |
|---|---|---|---|---|---|---|---|---|
| | | | | | | | | |

ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ ಮತ್ತು ಮೊಹರು.

## ಅನುಬಂಧ–2

### ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಲ್ಯಾಪ್ ಟಾಪ್ ಖರೀದಿಸಲು ಶಿಕ್ಷಕರ ಕಲ್ಯಾಣ ನಿಧಿಯಿಂದ ನೀಡುವ ಸಾಲದ ಅರ್ಜಿ ನಮೂನೆ.

| | | |
|---|---|---|
| 01 | ಶಿಕ್ಷಕರ ಹೆಸರು | |
| 02 | ಶಾಲೆಯ ಹೆಸರು ಮತ್ತು ವಿಳಾಸ | |
| 03 | ಹುಟ್ಟಿದ ದಿನಾಂಕ | |
| 04 | ಸೇವೆಗೆ ಸೇರಿದ ದಿನಾಂಕ | |
| 05 | ಆಜೀವ ಸದಸ್ಯತ್ವ ಕಾರ್ಡ ಸಂಖ್ಯೆ | |
| 06 | ಕೇಳಿದ ಸಾಲದ ಮೊತ್ತ | |

ನಾನು ..........................ರೂ ಬೆಲೆಯ ಲ್ಯಾಪ್ ಟ್ಯಾಪ್‌ನ್ನು ಖರೀದಿಸಲು ಉದ್ದೇಶಿಸಿರುತ್ತೇನೆ. ಖರೀದಿಸಿದ ಬಗ್ಗೆ ರಶೀದಿ ಮತ್ತು ವಾರಂಟಿನ ದೃಢೀಕೃತ ಜೆರಾಕ್ಸ ಪ್ರತಿಯನ್ನು ಸಲ್ಲಿಸುತ್ತೇನೆ. ನನಗೆ ಸಾಲ ಮಂಜೂರಾದ ಮರು...................... ತಿಂಗಳಿಂದ ನನ್ನ ವೇತನದಿಂದ ಪ್ರತಿ ತಿಂಗಳು ರೂ 1000/– ರಂತೆ 10 ಸಮ ಕಂತುಗಳಲ್ಲಿ ಸಾಲದ ಮೊತ್ತವನ್ನು ಕಟಾವಣೆ ಮಾಡಲು ಒಪ್ಪಿರುತ್ತೇನೆ.

ಶಿಕ್ಷಕರ ಸಹಿ.

ಮುಖ್ಯ ಶಿಕ್ಷಕರ ಸಹಿ, ಮತ್ತು ಮೊಹರು

#### ಕಛೇರಿ ಉಪಯೋಗಕ್ಕಾಗಿ

ಶ್ರೀ...................................ಶಿಕ್ಷಕರು....................................................ಶಾಲೆ ಇವರು ರೂ 10,000/–ಗಳ ಲ್ಯಾಪ್‌ಟಾಪ್ ಸಾಲಕ್ಕೆ ಅರ್ಹರಿದ್ದು, ಸದರಿಯವರಿಗೆ ರೂ10,000/–ಗಳ ಸಾಲವನ್ನು ಮಂಜೂರುಮಾಡಿ ........................ಬ್ಯಾಂಕ್ ನ ಚೆಕ್ ಸಂಖ್ಯೆ.............................ದಿನಾಂಕ.......................ರ ಮೂಲಕ ಪಾವತಿಸಲಾಗಿದೆ.

ಸ್ಥಳ:
ದಿನಾಂಕ:

ಕ್ಷೇತ್ರ ಶಿಕ್ಷಣಾಧಿಕಾರಿಗಳು